## Vijaya Vaani

Date: 21-11-2018 Page No: 02

Edition: Mysore Language: Kannada

# 23ರಿಂದ ಅಂತಾರಾಷ್ಟ್ರೀಯ ಸಮ್ಮೇಳನ

■ ವಿಜಯವಾಣಿ ಸುದ್ದಿಜಾಲ ಮೈಸೂರು

ಚಾಮುಂಡಿ ಬೆಟ್ಟದ ರಸ್ತೆಯಲ್ಲಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್ಸ್‌ಟಿಟ್ಯೂಟ್ ಫಾರ್ ಮ್ಯಾನೇಜ್ಮೆಂಟ್ ಡೆವಲಪ್ಮೆಂಟ್ ಸಂಸ್ಥೆಯಿಂದ ನ. 23, 24ರಂದು ಆರ್ಥಿಕ ಅಭಿವೃದ್ಧಿ ಹಾಗೂ ಸುಸ್ಥಿರ ಬೆಳವಣಿಗೆ: ಉದಯೋನ್ಮುಖ ಪ್ರವೃತ್ತಿಗಳು ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ. ನವದೆಹಲಿಯ ಐಐಟಿಯಲ್ಲಿ ಅತಿಥಿ ಪ್ರಾಧ್ಯಾಪಕರಾಗಿರುವ ಡಾ. ಆರ್.ಬಾಲಸುಬ್ರಮಣ್ಯಂ ಅವರು ನ. 23 ರಂದು ಬೆಳಗ್ಗೆ 9.45ಕ್ಕೆ ಸಮ್ಮೇಳನ ಉದ್ಘಾಟಿಸಿ, ಭಾಷಣ ಮಾಡಲಿದ್ದಾರೆ. ಬಹುರಾಷ್ಟ್ರೀಯ ಕಂಪನಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ಶಿಕ್ಷಣ ತಜ್ಞರಿಂದ ಆಹ್ವಾನಿತ ಭಾಷಣ ಇರಲಿದೆ. ಸಮ್ಮೇಳನದ ಮುಖ್ಯ ವಿಷಯಗಳ ಕುರಿತು ಮಹೇಶ್ವರ್ ಪೆರಿ, ಲಕ್ಷ್ಮೀ ಭಾರ್ಗವಿ, ಈಶ್ವರ ನಾರಾಯಣನ್, ಆರ್.ಸಿ.ಜಗದೀಶ್, ಡಾ.ಆಶ್ಲೇ ಪಿನ್ನಿಂಗ್ಟನ್ ಇತರರು ವಿಷಯ ಮಂಡಿಸಲಿದ್ದಾರೆ. ನ. 24 ರಂದು ಸಂಜೆ 3.45ಕ್ಕೆ ಹಮ್ಮಿಕೊಂಡಿರುವ ಸಮಾರೋಪದಲ್ಲಿ ಡಾ.ಎಂ.ಎಸ್.ಶ್ರೀರಾಮ್ ಭಾಷಣ ಮಾಡಲಿದ್ದಾರೆ.

» ಸಮ್ಮೇಳನ ಉದ್ಘಾಟಿಸಲಿರುವ ಬಾಲಸುಬ್ರಮಣ್ಯಂ